ಸುಸ್ಥಿರಗೊಳಬೇಕಾಗುತ್ತದೆ. ಅಲ್ಲದೆ. ಇಲಾಖೆಯ ಇತರೆ ಹೊಸ ಯೋಜನೆಗಳನ್ನು ಸಹ ಹಳೆಯ ಗ್ರಾಮ ಅರಣ್ಯ ಸಮಿತಿಗಳಿಗೆ ನಿರ್ವಹಿಸಲಾಗುತ್ತಿದೆ. ಉದಾಹರಣೆಗೆ. ಜೆ.ಬಿ.ಐ.ಸಿ. Iನೇ ಹಂತದಲ್ಲಿ ಸ್ಥಾಪಿಸಲಾದ ಕೆಲವು ಗ್ರಾಮ ಅರಣ್ಯ ಸಮಿತಿಗಳು ಕೇಂದ್ರ ಪುನಸ್ಚೇತ ರಾಷ್ಟ್ರೀಯ ಅರಣ್ಯೀಕರಣ ಯೋಜನೆಯಡಿಯಲ್ಲಿ ಕೆಲಸಗಳನ್ನು ಕೈಗೆತ್ತಿಕೊಳ್ಳಲಾಗಿದೆ.

ಊ) ಹೌದು ಆಗಾಗ ಇಂತಹ ಘಟನೆಗಳು ನಡೆಯುತ್ತವೆ.

ಊ) ಕಾಡಾನೆಗಳಿಂದ ರೈತರು ಬೆಳೆದ ಫಸಲು ಹಾಳಾಗುವುದನ್ನು ತಡೆಗಟ್ಟಲು ಇಲಾಖೆಯಿಂದ ಈ ಕೆಳಕಂಡ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1) ಸ್ಥಳೀಯ ಆನೆ ಓಡಿಸುವ ವಾಚರುಗಳು. ಪಟಾಕಿಗಳ ಸಹಾಯದಿಂದ ಕಾಡಿನಿಂದ ಹೊರಬಂದ ಕಾಡಾನೆಗಳನ್ನು ಕಾಡಿನೊಳಗೆ ಓಡಿಸಲು ಕ್ರಮ ತೆಗೆದುಕೊಳ್ಳುವುದು.

2) ಕಾಡಾನೆಗಳ ಹಾವಳಿ ಅಧಿಕವಾಗಿರುವ ಸೂಕ್ಷ್ಮ ಸ್ಥಳಗಳಲ್ಲಿ ಅರಣ್ಯ ಪ್ರದೇಶದ ಅಂಚಿನಲ್ಲಿ ಆನೆ ತಡೆ ಕಂದಕಗಳ ನಿರ್ಮಾಣ ಮಾಡುವುದು.

3) ಕಾಡಾನೆಗಳ ಹಾವಳಿ ಇರುವ ಅರಣ್ಯ ಪ್ರದೇಶಗಳ ಅಂಚಿನಲ್ಲಿ ಸೌರಶಕ್ತಿ ಬೇಲಿ ನಿರ್ಮಾಣ ಮಾಡುವುದು.

4) ಕುಮ್ಕಿ ಶಿಬಿರದ ಸಾಕಾನೆಗಳ ಸಹಾಯದಿಂದ ಕಾಡಿನಿಂದ ಹೊರ ಬಂದ ಕಾಡಾನೆಗಳನ್ನು ಕಾಡಿನೊಳಗೆ ಓಡಿಸುವ ಕಾರ್ಯಾಚರಣೆ ಮಾಡಲಾಗುವುದು.

5) ಅರಣ್ಯ ಪ್ರದೇಶಗಳಲ್ಲಿ ಕಾಡಾನೆಗಳಿಗೆ ವರ್ಷವಿಡೀ ಕುಡಿಯುವ ನೀರು ದೊರಕುವಂತೆ ಅರಣ್ಯದಲ್ಲಿರುವ ಕೆರೆಗಳ ಹೂಳು ತೆಗೆಯುವುದು. ಇದರಿಂದ ಖಾಸಗಿ ಪ್ರದೇಶಕ್ಕೆ ಆನೆಗಳು ನುಗ್ಗುವುದನ್ನು ತಪ್ಪಿಸಬಹುದಾಗಿರುತ್ತದೆ.

6) ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾಗೂ ಮಾನವ ಸಾವಿಗೆ ಕಾರಣವಾಗಿರುವ ಪುಂಡ ಕಾಡಾನೆಗಳನ್ನು ಗುರುತಿಸಿ ಅವುಗಳನ್ನು ಹಿಡಿಯುವುದು.

ಆದಾಗ್ಯೂ ಫಸಲು ನಷ್ಟವಾದಾಗ, ಆಗಿರುವ ನಷ್ಟವನ್ನು ಪರಿಶೀಲಿಸಿ ಪರಿಹಾರವನ್ನು ಹಣದ ರೂಪದಲ್ಲಿ ನೀಡಲಾಗುತ್ತಿದೆ. ನಷ್ಟಕ್ಕೆ ಪರಿಹಾರವನ್ನು ನೀಡಲಾಗುತ್ತಿದೆಯೇ ವಿನಹಃ ಸಂಪೂರ್ಣ ನಷ್ಟವನ್ನು ಭರಿಸಲಾಗುವುದಿಲ್ಲ.

ಃಐ) (ಎ) ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

400 (644) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರತಿವರ್ಷವೂ ರಾಜ್ಯದ ಕರಾವಳಿ ಜಿಲ್ಲೆಗಳಲ್ಲಿ ಭೀಕರ ಮಳೆ, ಬಿರುಗಾಳಿ ಹಾಗೂ ಇತರೆ ಪ್ರಕೃತಿ ವಿಕೋಪಗಳಿಂದಾಗಿ ಅಪಾರ ಆಸ್ತಿ-ಪಾಸ್ತಿ, ಬೆಳೆ ಹಾಗೂ ಜನ-ಜಾನುವಾರು ಹಾನಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ :

ಆ) ಹಾಗಿದಲ್ಲಿ, 2005–06ನೇ ಸಾಲಿನಲ್ಲಿ ಆದ ಹಾನಿಯ ವಿವರ ಮತ್ತು ಕೈಗೊಂಡ ಪರಿಹಾರ ಕಾಮಗಾರಿಗಳ ವಿವರ ಹಾಗೂ ನೀಡಿರುವ ಪರಿಹಾರದ ವಿವರವನ್ನು ವಿಧಾನಸಭಾ ಕ್ಷೇತ್ರವಾರು ನೀಡುವುದು:

ಇ) 2006–07 ಸಾಲಿನಲ್ಲಿ ಮಳೆ ಹಾನಿ ಹಾಗೂ ಕೈಗೊಂಡ ಪರಿಹಾರ ಕಾರ್ಯಕ್ರಮಗಳ ವಿವರ ಮತ್ತು ಒದಗಿಸಲಾದ ಅನುದಾನ ಹಾಗೂ ಬಿಡುಗಡೆಯಾದ ಅನುದಾನದ ವಿವರವನ್ನು ನೀಡುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಹೌದು.

ಆ) ವಿಧಾನಸಭಾ ಕ್ಷೇತ್ರವಾರು/ತಾಲ್ಲೂಕುವಾರು ವಿವರಗಳನ್ನು ಅನುಬಂಧ 1–6 ರವರೆಗೆ ನೀಡಿದೆ.

ಇ) ಅನುಬಂಧ–7 ರಲ್ಲಿ ವಿವರಗಳನ್ನು ನೀಡಿದೆ.

ಅನುಬಂಧ–1

ಚುಕ್ಕೆ ಗುರುತಿಲ್ಲದ ಪ್ರಶ್ನೆಸಂಖ್ಯೆ: 644 ರ ಉತ್ತರಕ್ಕೆ ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆ:

ಕ್ರ. ಸಂ.	ಕ್ಷೇತ್ರ/ತಾಲ್ಲೂಕು	ಹಾನಿಯ ವಿವರ		ಪರಿಹಾರ ಕಾಮಗಾರಿಗಳ ವಿವ	
		ಕಾಮಗಾರಿಗಳು	ಅಂದಾಜು	ತೆಗೆದುಕೊಂಡ ಕಾಮಗಾರಿಗಳು	ಮೊತ್ತ (ರೂ. ಲಕ್ಷ)
1	ಪುತ್ತೂರು	192	374.30	61	61.85
2	ಉಳ್ಳಾಲ	81	189.00	63	57.43
3	ಬಂಟ್ವಾಳ	121	220.05	72	88.25
4	ಬೆಳ್ತಂಗಡಿ	94	173.95	78	63.50
5	ವಿಟ್ಲ	448	156.75	75	60.94
6	ಮಂಗಳೂರು	383	157.75	57	75.13
7	ಮೂಡಬಿದ್ರೆ	87	97.89	58	60.42
8	ಸುರತ್ಕಲ್	80	172.25	62	61.25
9	ಸುಳ್ಯ	108	132.21	45	55.00
	ಒಟ್ಟು	**1594**	**1674.15**	**571**	**583.77**

ಅನುಬಂಧ–2

2005–06ರಲ್ಲಿ ಇತರೆ ಹಾನಿ ಮತ್ತು ನೀಡಿರುವ ಪರಿಹಾರ : (ದಕ್ಷಿಣ ಕನ್ನಡ ಜಿಲ್ಲೆ)

ಹಾನಿಯ ವಿವರ	ಸಂಖ್ಯೆ	ನೀಡಿರುವ ಪರಿಹಾರ (ಲಕ್ಷ)
ಜೀವಹಾನಿ	15	7.5
ಗಾಯಗೊಂಡವರು	8	0.285
ಜಾನುವಾರು ಹಾನಿ	2	0.03
ಮನೆಗಳ ಹಾನಿ: 1) ಪೂರ್ಣ ಹಾನಿ		
ಹಾನಿಯ ವಿವರ	ಸಂಖ್ಯೆ	ನೀಡಿರುವ ಪರಿಹಾರ (ಲಕ್ಷ)
ಪಕ್ಕಾ ಮನೆ	34	3.21
ಕಚ್ಚಾ ಮನೆ	59	3.37
2) ಭಾಗಶಃ ಹಾನಿ:		
ಪಕ್ಕಾ ಮನೆ	534	7.44
ಕಚ್ಚಾ ಮನೆ	343	2.96
3) ಆಂಶಿಕ ಹಾನಿ	284	1.85
	ಒಟ್ಟು	**26.645**

ಅನುಬಂಧ–3

2005–06 ರಲ್ಲಿ ಇತರೆ ಹಾನಿ ಮತ್ತು ನೀಡಿರುವ ಪರಿಹಾರ

ಉತ್ತರ ಕನ್ನಡ ಜಿಲ್ಲೆ:

ಕ್ರ. ಸಂ.	ಕ್ಷೇತ್ರ/ತಾಲ್ಲೂಕು	ಹಾನಿಯ ವಿವರ		ಪರಿಹಾರ ಕಾಮಗಾರಿಗಳ ವಿವರ	
			ಅಂದಾಜು	ತೆಗೆದುಕೊಂಡ ಕಾಮಗಾರಿಗಳು	ಮೊತ್ತ (ರೂ. ಲಕ್ಷ)
1	ಕಾರವಾರ		353.22	70	77.50
2	ಅಂಕೋಲಾ		416.32	89	83.00
3	ಕುಮಟಾ		263.29	68	81.00
4	ಹೊನ್ನಾವರ		398.95	88	78.00
5	ಭಟ್ಕಳ		199.00	80	76.00

6	ಜೋಯಿಡಾ		236.98	73	75.60
7	ಶಿರಸಿ		416.42	137	78.00
8	ಸಿದ್ದಾಪುರ		350.57	115	76.30
9	ಯಲ್ಲಾಪುರ		199.81	122	91.10
10	ಮುಂಡಗೋಡ		859.09	104	101.65
11	ಹಳಿಯಾಳ		347.71	118	134.55
	ಒಟ್ಟು		**4582.36**	**1064**	**952.70**

ಅನುಬಂಧ-4

2005-06ರಲ್ಲಿ ಇತರೆ ಹಾನಿ ಮತ್ತು ನೀಡಿರುವ ಪರಿಹಾರ : (ಉತ್ತರ ಕನ್ನಡ ಜಿಲ್ಲೆ)

ಹಾನಿಯ ವಿವರ	ಸಂಖ್ಯೆ	ನೀಡಿರುವ ಪರಿಹಾರ (ಲಕ್ಷ)
ಜೀವಹಾನಿ	6	3.00
ಜಾನುವಾರು ಹಾನಿ	6	0.135
ಮನೆಗಳ ಹಾನಿ	719	10.02
ಬೆಳೆಹಾನಿ	596.509 ಹೆಕ್ಟೇರ್	12.343
ವಿದ್ಯುಚ್ಛಕ್ತಿ	–	30.00
ಪಶುವೈದ್ಯಕೀಯ ಔಷಧಿಗಳು	–	9.50
ತೋಟಗಾರಿಕೆ ಇಲಾಖೆ	–	7.50
	ಒಟ್ಟು	72.498

ಅನುಬಂಧ-5

2005-06 ರಲ್ಲಿ ಇತರೆ ಹಾನಿ ಮತ್ತು ನೀಡಿರುವ ಪರಿಹಾರ

ಉಡುಪಿ ಜಿಲ್ಲೆ:

ಕ್ರ. ಸಂ.	ಕ್ಷೇತ್ರ/ತಾಲ್ಲೂಕು	ಹಾನಿಯ ವಿವರ	ಪರಿಹಾರ ಕಾಮಗಾರಿಗಳ ವೆಚ್ಚ	
			ತೆಗೆದುಕೊಂಡ ಕಾಮಗಾರಿಗಳು	ಮೊತ್ತ (ರೂ. ಲಕ್ಷ)
1	ಉಡುಪಿ	ಉಡುಪಿ ಜಿಲ್ಲೆಯಲ್ಲಿ ಕ್ಷೇತ್ರ/ ತಾಲ್ಲೂಕುವಾರು	184	221.70
2	ಬ್ರಹ್ಮಾವರ		130	112.64
3	ಕಾಪು		113	106.82

4	ಕುಂದಾಪುರ	ಒಟ್ಟು 763.07 ಲಕ್ಷ ಹಾನಿ ಸಂಭವಿಸಿರುತ್ತದೆ	172	201.70
5	ಬೈಂದೂರು		127	127.65
6	ಕಾರ್ಕಳ		198	112.24
	ಒಟ್ಟು		934	882.75

ಅನುಬಂಧ–6

2005–06ರಲ್ಲಿ ಇತರೆ ಹಾನಿ ಮತ್ತು ನೀಡಿರುವ ಪರಿಹಾರ : (ಉಡುಪಿ ಜಿಲ್ಲೆ)

ಹಾನಿಯ ವಿವರ	ಸಂಖ್ಯೆ	ನೀಡಿರುವ ಪರಿಹಾರ (ಲಕ್ಷ)
ಜೀವಹಾನಿ	13	6.50
ಗಾಯಗೊಂಡವರು	–	–
ಜಾನುವಾರು ಹಾನಿ	15	0.648
ಮನೆಗಳ ಹಾನಿ:		
1) ಪಕ್ಕಾ ಮನೆ ಪೂರ್ಣ ಹಾನಿ	14	1.32
2) ಪಕ್ಕಾ ಮನೆ ಭಾಗಶಃ ಹಾನಿ:	422	5.532
3) ಕಚ್ಚಾ ಮನೆ		
ಪೂರ್ಣ ಹಾನಿ	32	0.695
ಭಾಗಶಃ ಹಾನಿ	20	0.237
4) ಬೆಂಕಿಯಿಂದ ಮನೆ ಪೂರ್ಣನಾಶ	7	0.438
5) ಬೆಂಕಿಯಿಂದ ಮನೆ ಭಾಗಶಃ ನಾಶ	3	0.06
	ಒಟ್ಟು	15.43

ಅನುಬಂಧ–7

2005–06ನೇ ಸಾಲಿನಲ್ಲಿ ಮಳೆ ಹಾನಿ, ಕೈಗೊಂಡ ಪರಿಹಾರ ಕಾರ್ಯಕ್ರಮಗಳ ವಿವರ ಮತ್ತು ಒದಗಿಸಲಾದ ಅನುದಾನದ ವಿವರಗಳು

ಜಿಲ್ಲೆ.	ಹಾನಿಯ ವಿವರ	ನೀಡಿದ ಪರಿಹಾರ (ರೂ. ಲಕ್ಷಗಳಲ್ಲಿ)	ಸರ್ಕಾರದಿಂದ ಒದಗಿಸಿದ ಬಿಡುಗಡೆಯಾದ ಅನುದಾನ
1	2	3	4
ದಕ್ಷಿಣ ಕನ್ನಡ ಜಿಲ್ಲೆ	ಜೀವ ಹಾನಿ–4	1.50	ದಕ್ಷಿಣ ಕನ್ನಡ ಜಿಲ್ಲೆಗೆ 2006–07ನೇ ಸಾಲಿನಲ್ಲಿ ಒಟ್ಟು ರೂ.60.00 ಲಕ್ಷ ಅನುದಾನ ಬಿಡುಗಡೆ ಮಾಡಿದೆ.
	ಗಾಯಗೊಂಡವರು–1	0.05	
	ಮನೆಗಳ ಹಾನಿ:		
	1) ಪೂರ್ಣ ಹಾನಿ		
	ಪಕ್ಕಾ ಮನೆ –23	0.80	
	ಕಚ್ಚಾ ಮನೆ–23	0.78	

1	2	3	4
	2) ಭಾಗಶಃ ಹಾನಿ: ಪಕ್ಕಾ ಮನೆ–165 ಕಚ್ಚಾ ಮನೆ–38 3) ಆಂಶಿಕ ಹಾನಿ –61 ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಸಾರ್ವಜನಿಕ ಆಸ್ತಿ ಹಾನಿಯ ಅಂದಾಜು ತಯಾರಿಸಲಾಗುತ್ತಿದೆ.	 3.27 0.43 0.48	ದಕ್ಷಿಣ ಕನ್ನಡ ಜಿಲ್ಲೆಗೆ 2006–07ನೇ ಸಾಲಿನಲ್ಲಿ ಒಟ್ಟು ರೂ.60.00 ಲಕ್ಷ ಅನುದಾನ ಬಿಡುಗಡೆ ಮಾಡಿದೆ.
ಉತ್ತರ ಕನ್ನಡ ಜಿಲ್ಲೆ	ಜೀವ ಹಾನಿ–3 ಮನೆಗಳ ಹಾನಿ ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ 2006–07ನೇ ಸಾಲಿನಲ್ಲಿ ಆಗಿರುವ ಒಟ್ಟು ಹಾನಿ 629.70 ಲಕ್ಷ	1.5 7.036	ಉತ್ತರ ಕನ್ನಡ ಜಿಲ್ಲೆಗೆ 2006–07ನೇ ಸಾಲಿನಲ್ಲಿ ಒಟ್ಟು ರೂ. 30.00 ಲಕ್ಷ ಅನುದಾನ ಬಿಡುಗಡೆ ಮಾಡಿದೆ.
ಉಡುಪಿ ಜಿಲ್ಲೆ	ಜೀವ ಹಾನಿ–7 ತೋಟಗಾರಿಕೆ ಬೆಳೆ ಹಾನಿ –5 ಹಚ್ ಮನೆಗಳ ಹಾನಿ: 1) ಪೂರ್ಣ ಹಾನಿ–15 2) ಭಾಗಶಃ ಹಾನಿ–49	6.50 0.031 0.295 0.679	ಉಡುಪಿ ಜಿಲ್ಲೆಗೆ 2006–07ನೇ ಸಾಲಿನಲ್ಲಿ ಒಟ್ಟು ರೂ. 60.00 ಲಕ್ಷ ಅನುದಾನ ಬಿಡುಗಡೆ ಮಾಡಿದೆ.

401 (645) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಕ್ರಮ ಸಕ್ರಮ ಮಂಜೂರಾತಿಯಲ್ಲಿ ಕೆಲವು ಪ್ರದೇಶಗಳು ನಗರ ಸಭೆಗೆ ಸೇರಿಸಿದ ನಂತರ 5 ಕಿ.ಮೀ. ಒಳಗೆ ಬರುವ ಸಾಗುವಳಿಯನ್ನು ಸಕ್ರಮ ಗೊಳಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಪ್ರಸ್ತುತ ಸರ್ಕಾರವು ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 108 (ಐ)ಗೆ ಮಾಡಿರುವ ತಿದ್ದುಪಡಿಯಂತೆ ನಗರ ಅಥವಾ ಪಟ್ಟಣ ಪರಿಮಿತಿಗೊಳಗಿರುವ ಯಾವುದೇ ಸರ್ಕಾರಿ ಭೂಮಿಯನ್ನು ಯಾರೇ ವ್ಯಕ್ತಿಗೆ ಅಥವಾ ಒಂದು ಖಾಸಗಿ ಸಂಸ್ಥೆಗೆ ಮಂಜೂರು